ಕರ್ನಾಟಕ ಸರಕಾರ

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ
ದಂಡಾಧಿಕಾರಿಯವರ ಕಾರ್ಯಾಲಯ,
ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು – 575001.

Deputy Commissioner &
District Magistrate's Office,
Dakshina Kannada,
Mangaluru-575001.

ಇಎಸ್ ಟಿ (2)ಸಿಆರ್. 92/2018/E-53535/ಎ2

ದಿನಾಂಕ : 12-11-2018

## ಪ್ರಕಟಣೆ

ದಕ್ಷಿಣ ಕನ್ನಡ ಜಿಲ್ಲಾ ವ್ಯಾಪ್ತಿಯ ತಾಲೂಕುಗಳಲ್ಲಿ ಖಾಲಿಯಿರುವ 34 ಗ್ರಾಮಲೆಕ್ಕಿಗರ ಹುದ್ದೆಗಳನ್ನು ನೇರ ನೇಮಕಾತಿಯಿಂದ ಭರ್ತಿ ಮಾಡುವ ಸಲುವಾಗಿ ಕರ್ನಾಟಕ ಸಾಮಾನ್ಯ ಸೇವೆಗಳು (ರೆವೆನ್ಯೂ ಸಬೋರ್ಡಿನೇಟ್ ಬ್ರಾಂಚ್)(ಕೇಡರ್ & ರಿಕ್ರೂಟ್‌ಮೆಂಟ್) ನಿಯಮಗಳು 2008 ಮತ್ತು ತಿದ್ದುಪಡಿ ನಿಯಮಗಳು 2009 ರನ್ವಯ ಹಾಗೂ ಸರಕಾರದ ಪತ್ರ ಸಂಖ್ಯೆ.ಕಂ.ಇ.04/ಬಿಎಸ್‌ಸಿ/2011 ದಿನಾಂಕ:25-02-2011ರಲ್ಲಿ ನೀಡಿರುವ ನಿರ್ದೇಶನಗಳಂತೆ online ಮುಖಾಂತರ ಅರ್ಹ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿ ದಿನಾಂಕ: 22-09-2018 ರಂದು ಅಧಿಸೂಚನೆ ಹೊರಡಿಸಲಾಗಿತ್ತು.

ಈ ಅಧಿಸೂಚನೆಯಂತೆ ಅರ್ಜಿ ಸ್ವೀಕರಿಸಲು ನಿಗದಿಪಡಿಸಿದ ಕೊನೆಯ ದಿನಾಂಕ 31-10-2018 ರೊಳಗೆ ಅರ್ಜಿಗಳನ್ನು online ಮೂಲಕ ಸಲ್ಲಿಸಲು ಅಧಿಸೂಚನೆ ಹೊರಡಿಸಲಾಗಿದೆ.

ಸರಕಾರವು ನೇರನೇಮಕಾತಿಯಲ್ಲಿ ಅನುಸರಿಸಬೇಕಾದ ಮೀಸಲಾತಿ ಪ್ರಮಾಣ ಮತ್ತು ಅದಕ್ಕಾಗಿ ಅನುಸರಿಸ ಬೇಕಾದ ವರ್ಟಿಕಲ್ ಮತ್ತು ಸಮತಳ ಮೀಸಲಾತಿ ಬಗ್ಗೆ ರೋಸ್ಟರನ್ನು ನಿಗಧಿಪಡಿಸಿ ದಿನಾಂಕ:20-06-95 ರ ಸರ್ಕಾರಿ ಆದೇಶ ಸಂ.ಸಿಆಸುಇ/08/ಸೆಹಿಮ/95 ಮತ್ತು ದಿನಾಂಕ:04-01-2008ರ ಸರ್ಕಾರಿ ಆದೇಶ ಸಂ.ಸಿಆಸುಇ/53/ಸೆನನಿ/2007 ರಲ್ಲಿ ಆದೇಶ ಹೊರಡಿಸಿರುತ್ತದೆ.

ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ 128 ಸೆನೆನಿ 2006 ದಿನಾಂಕ 1-8-2009 ರಂತೆ ಸಿ ಹುದ್ದೆಗಳ ನೇರ ನೇಮಕಾತಿಯಲ್ಲಿ ಅಂಗವಿಕಲರಿಗೆ ಶೇಕಡಾ 5 ರಷ್ಟು ಮೀಸಲಾತಿ ಇರಿಸಿದ್ದು. ಪ್ರಸ್ತುತ ಅಧಿಸೂಚನೆಯಲ್ಲಿ ನಮೂದಿಸಿದ ಒಂದು (1) ಅಂಗವಿಕಲರಿಗೆ ಮೀಸಲಿರಿಸಿದ ಹುದ್ದೆಯು ರೋಸ್ಟರ್ ಬಿಂದು " 84 " ಆಗಿರುತ್ತದೆ. "ಅಂತೆಯೇ 84 ನೇ ರೋಸ್ಟರ್ ಬಿಂದು ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ/ ಬುದ್ಧಿಮಾಂದ್ಯತೆ/ ಮಾನಸಿಕ ಅಸ್ವಸ್ಥತೆ (Mentally ill) ಅಂಗವಿಕಲತೆಗೆ ಮೀಸಲಿರುತ್ತದೆ. ಅದರಂತೆ ಕುಷ್ಠರೋಗದಿಂದ ಗುಣಮುಖರಾದ ಅಂಗವಿಕಲರಿಗೆ/ ಬುದ್ಧಿಮಾಂದ್ಯತೆ/ ಮಾನಸಿಕ ಅಸ್ವಸ್ಥತೆ (Mentally ill) ಅಂಗವಿಕಲತೆಯ ಅಭ್ಯರ್ಥಿಗಳ ಅರ್ಜಿಯನ್ನು ವರ್ಗವಾರು ಮೆರಿಟ್ ಆಧಾರದ ಮೇರೆಗೆ ಪರಿಗಣಿಸಲಾಗಿದೆ.

ಮೇಲೆ ಹೇಳಿರುವ ಸರ್ಕಾರಿ ನಿಯಮಗಳು, ಆದೇಶಗಳು, ಅಧಿಸೂಚನೆಯಲ್ಲಿ ನೀಡಿರುವ ನಿರ್ದೇಶನಗಳನ್ವಯ ಈ ಜಿಲ್ಲೆಯಲ್ಲಿ ಖಾಲಿಯಿರುವ 34 ಗ್ರಾಮಲೆಕ್ಕಿಗರ ಹುದ್ದೆಗಳನ್ನು ಭರ್ತಿಗೊಳಿಸುವ ಬಗ್ಗೆ ಹೊರಡಿಸಲಾದ ಅಧಿಸೂಚನೆಯನ್ನು ಅನುಸರಿಸಿ ನಿಗಧಿತ ಅವಧಿಯೊಳಗೆ ಶುಲ್ಕ ಪಾವತಿಸಿ Online ಮೂಲಕ ಸ್ವೀಕೃತವಾದ ಅರ್ಜಿಗಳನ್ನು ಪರಿಶೀಲಿಸಿ, 1:5 ಅನುಪಾತದಲ್ಲಿ ( 34 ಖಾಲಿ ಸ್ಥಾನಗಳಿಗೆ 170 ಅಭ್ಯರ್ಥಿಗಳು) ಅರ್ಹ ಅಭ್ಯರ್ಥಿಗಳ ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಈ ಮೂಲಕ ಪ್ರಕಟಿಸಲಾಗಿದೆ. ಈ ಪಟ್ಟಿಯು ಅಭ್ಯರ್ಥಿಗಳ ಪರಿಶೀಲನಾ ಪಟ್ಟಿಯೇ ಹೊರತು ಆಯ್ಕೆ ಪಟ್ಟಿಯಾಗಿರುವುದಿಲ್ಲ. ಈ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿದ್ದ ಮಾತ್ರಕ್ಕೆ ಅಭ್ಯರ್ಥಿಗಳಿಗೆ ನೇಮಕಾತಿಯ ಬಗ್ಗೆ ಯಾವುದೇ ಹಕ್ಕು ಸಾಧಿಸಲು ಬರುವುದಿಲ್ಲ. ಮೂಲ ದಾಖಲೆಗಳ ಪರಿಶೀಲನೆ ಸಮಯದಲ್ಲಿ ಲೋಪದೋಷಗಳು ಕಂಡುಬಂದಲ್ಲಿ ಹಾಗೂ ಅನರ್ಹತೆ ಇದ್ದಲ್ಲಿ ಅಂತಹ ಅನರ್ಹ ಅಭ್ಯರ್ಥಿಗಳನ್ನು ನೇಮಕಾತಿ ಪ್ರಕ್ರಿಯೆಯಿಂದ ಕೈಬಿಟ್ಟು ನಂತರ ಅರ್ಹ ಅಭ್ಯರ್ಥಿಗಳ 1:1 ಅನುಪಾತದಲ್ಲಿ ಅಂತಿಮವಾಗಿ ಆಯ್ಕೆಯಾದ ಅಭ್ಯರ್ಥಿಗಳ ಆಯ್ಕೆ ಪಟ್ಟಿಯನ್ನು ಮುಂದೆ ನಿಗದಿ ಪಡಿಸಿದ ದಿನಾಂಕ 15-12-2018 ರಂದು ಪ್ರಕಟಿಸಲಾಗುವುದು.

ಈ ತಾತ್ಕಾಲಿಕ ಪರಿಶೀಲನಾ ಪಟ್ಟಿಯ ಬಗ್ಗೆ ಯಾರಿಗಾದರೂ ಆಕ್ಷೇಪಣೆಗಳು ಇದ್ದಲ್ಲಿ ದಿನಾಂಕ: 12-11-2018 ರಿಂದ 28-11-2018 ರ ( ಸರ್ಕಾರಿ ರಜಾ ಹೊರತು ಪಡಿಸಿ ) ಅಪರಾಹ್ನ 5-00 ಗಂಟೆಯೊಳಗೆ ಈ ಕಛೇರಿಗೆ ಖುದ್ದಾಗಿ ಹಾಜರಾಗಿ ನಿಖರವಾದ ಆಕ್ಷೇಪಣೆಯನ್ನು ಸಂಬಂಧಿಸಿದ ಮೂಲ ದಾಖಲಾತಿ ಮತ್ತು ಒಂದು ದೃಢೀಕೃತ ಜೆರಾಕ್ಸ್ ಪ್ರತಿಯೊಂದಿಗೆ ಜಿಲ್ಲಾಧಿಕಾರಿ ಕಛೇರಿಯ ಚುನಾವಣಾ ತಹಶೀಲ್ದಾರರ ಎದುರು ಹಾಜರುಪಡಿಸಬೇಕು. ನಂತರ ಬಂದ ಆಕ್ಷೇಪಣೆಗಳನ್ನು ಮಾನ್ಯ ಮಾಡಲಾಗುವುದಿಲ್ಲ.

ಈ ತಾತ್ಕಾಲಿಕ ಪರಿಶೀಲನಾ ಪಟ್ಟಿಯಲ್ಲಿ ಹೆಸರು ಸೇರ್ಪಡೆಯಾಗಿರುವ ಅಭ್ಯರ್ಥಿಗಳು ಮಾತ್ರ ತಮ್ಮ ವಿದ್ಯಾರ್ಹತೆಗೆ ಸಂಬಂಧಿಸಿದ ಮೂಲ ದಾಖಲೆಗಳು (SSLC/P.U.C./ICSE & CBSE ಯ ಅಂಕಪಟ್ಟಿಗಳು) ಮೀಸಲಾತಿಗೆ ಸಂಬಂಧಿಸಿದ ಮೂಲ ಪ್ರಮಾಣ ಪತ್ರಗಳನ್ನು ಶುಲ್ಕ ಪಾವತಿಸಿದ ಬಗ್ಗೆ ಚಲನ್ ಸಹಿತ **ದಿನಾಂಕ: 28-11-2018 ರಂದು ದಕ್ಷಿಣ ಕನ್ನಡ ಜಿಲ್ಲಾಧಿಕಾರಿಯವರ ಕಛೇರಿಯ 2ನೇ ಮಹಡಿಯಲ್ಲಿರುವ ಸಭಾಂಗಣದಲ್ಲಿ ಬೆಳಿಗ್ಗೆ: 10-00 ಗಂಟೆಗೆ** ಪರಿಶೀಲನೆಗೆ ಈ ಕೆಳಗೆ ವಿವರಿಸಿದ ದಾಖಲೆಗಳನ್ನು ಪತ್ರಾಂಕಿತ ಅಧಿಕಾರಿಯವರಿಂದ (Gazetted Officer) ದೃಢೀಕರಿಸಿ ಪರಿಶೀಲನೆ ಸಮಯದಲ್ಲಿ ಒಪ್ಪಿಸಬೇಕು. ಅಭ್ಯರ್ಥಿಗಳು ದಿನಾಂಕ **28-11-2018** ರಂದು ತಪ್ಪದೆ ಹಾಜರಾಗತಕ್ಕದ್ದು. ಮೂಲದಾಖಲಾತಿ, ಪ್ರಮಾಣ ಪತ್ರಗಳನ್ನು ದಿನಾಂಕ: **28-11-2018** ರಂದು ಹಾಜರುಪಡಿಸದಿದ್ದಲ್ಲಿ ಅಂತಹ ಅಭ್ಯರ್ಥಿಗಳ ಹೆಸರನ್ನು ಅಂತಿಮ ಆಯ್ಕೆ ಪಟ್ಟಿಯಿಂದ ಕೈಬಿಡಲಾಗುವುದು.

ತಾತ್ಕಾಲಿಕ ಪರಿಶೀಲನಾ ಪಟ್ಟಿಯನ್ನು ಈ ಕಚೇರಿಯ ವೆಬ್ ಸೈಟ್ http://dk.nic.in ಯಲ್ಲಿ ಪರಿಶೀಲಿಸಬಹುದು.

ಈ ವಿಚಾರವಾಗಿ ಹೆಚ್ಚಿನ ಮಾಹಿತಿ/ಸ್ಪಷ್ಟೀಕರಣ ಅವಶ್ಯವಿದ್ದಲ್ಲಿ ಈ ಕಚೇರಿಯ **ದೂರವಾಣಿ ಸಂಖ್ಯೆ: 0824-2220590** ನ್ನು ಸಂಪರ್ಕಿಸಬಹುದು. ಹೊರ ಜಿಲ್ಲೆಯ ಅಭ್ಯರ್ಥಿಗಳಿಗೆ ಈ ಕಚೇರಿ ವಿಳಾಸ ಈ ಕೆಳಗಿನಂತಿದೆ.
**( ಜಿಲ್ಲಾಧಿಕಾರಿ ಕಚೇರಿ, ಸ್ಟೇಟ್ ಬ್ಯಾಂಕ್, ಹ್ಯಾಮಿಲ್ಟನ್ ಸರ್ಕಲ್, ಮಂಗಳೂರು )**

**ಪರಿಶೀಲನೆಯ ಸಂದರ್ಭದಲ್ಲಿ ಅಭ್ಯರ್ಥಿಗಳು ಹಾಜರುಪಡಿಸಬೇಕಾದ ದಾಖಲೆಗಳ ಮಾಹಿತಿ**
**( ಅನ್ವಯಿಸುವ ದಾಖಲೆಗಳು ಮಾತ್ರ)**

| | | |
|---|---|---|
| ಅಂಕಪಟ್ಟಿ (SSLC/P.U.C./ICSE & CBSE ) | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಜಾತಿ ಮತ್ತು ಆದಾಯ ಪ್ರಮಾಣ ಪತ್ರ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಶುಲ್ಕ ಪಾವತಿಸಿದ ಬಗ್ಗೆ ಚಲನ್ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಗ್ರಾಮೀಣ ಅಭ್ಯರ್ಥಿ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಕನ್ನಡ ಮಾಧ್ಯಮ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಯೋಜನಾ ನಿರಾಶ್ರಿತರ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಅಂಗವಿಕಲತೆ ಪ್ರಮಾಣ ಪತ್ರ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಮಾಜಿ ಸೈನಿಕನೆಂಬ ದೃಢಪತ್ರ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಸರಕಾರಿ ನೌಕರರಾಗಿದ್ದಲ್ಲಿ ಪ್ರಾಧಿಕಾರದಿಂದ ನಿರಾಕ್ಷೇಪಣಾ ಪತ್ರ | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಯಾವುದಾದರೂ ಗುರುತಿನ ಚೀಟಿ (ADHAR/VOTER ID/DL/PAN Etc.) | ಮೂಲ ಪ್ರತಿ | 2 ದೃಢೀಕೃತ ಪ್ರತಿಗಳು |
| ಇತ್ತೀಚಿನ ಭಾವಚಿತ | 2 ಮೂಲ ಪ್ರತಿ | -- |

( ಕುಮಾರ )
ಕಾರ್ಯದರ್ಶಿ,
ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ
ಮತ್ತು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.

( ಎಸ್. ಸಸಿಕಾಂತ್ ಸೆಂಥಿಲ್ )
ಅಧ್ಯಕ್ಷರು,
ಗ್ರಾಮಲೆಕ್ಕಿಗರ ನೇರನೇಮಕಾತಿ ಆಯ್ಕೆ ಪ್ರಾಧಿಕಾರ
ಮತ್ತು ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು.